**ದಿನಾಂಕ 5-06-2013 ರಂದು ರಾಜ್ಯ ಯೋಜನಾ ನಿರ್ದೇಶಕರು ಅನಿರೀಕ್ಷಿತವಾಗಿ ಭೇಟಿ ಮಾಡಿದ ವಿಶೇಷ ವಸತಿ ಶಾಲೆ, ತಲಘಟ್ಟಪುರ ಕೇಂದ್ರದ ವರದಿ**

ಸದರಿ ಕೇಂದ್ರಕೆ, ಉ.ನಿ, ಕ್ಷೇತ್ರ ಶಿಕ್ಷಣ ಅಧಿಕಾರಿಗಳು, ಡಿ.ವೈ.ಪಿ.ಸಿ, ಬಿ.ಆರ್.ಸಿ ಹಾಗೂ ಕಾರ್ಯಪಾಲಕ ಅಭಿಯಂತರರ ತಂಡದಲ್ಲಿ ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿವೀಕ್ಷಣೆಯನ್ನು ದಿನಾಂಕ 5-06-2013 ರಂದು ಸಂಜೆ 5.45 ಗಂಟೆಗೆ ನಡೆಸಲಾಯಿತು.

ಕೇಂದ್ರದ ಆವರಣ, ಭೌತಿಕ ಸೌಕರ್ಯಗಳು, ವಸತಿಯುತ ಸೌಕರ್ಯಗಳು ಎಲ್ಲವನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ತುರ್ತು ಕ್ರಮವಹಿಸಲು ಆದೇಶಿಸಲಾಯಿತು.

1. ಸದರಿ ವಸತಿ ಶಾಲೆಯು ಅವಕಾಶ ವಂಚಿತ ಮಕ್ಕಳಿಗಾಗಿ ವಿಶೇಷವಾಗಿ ನಡೆಸುತ್ತಿರುವ ಶಾಲೆಯಾಗಿದ್ದು, ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಕಛೇರಿಯಿಂದ ಕ್ರಮ ಕೈಗೊಳ್ಳುತ್ತಿದ್ದು, ಕೇಂದ್ರವು ತಾತ್ಕಾಲಿಕವಾಗಿ ಸ.ಮಾ.ಹಿ.ಪ್ರಾಥಮಿಕ ಶಾಲೆ, ತಲಘಟ್ಟಪುರ ದಲ್ಲಿ ನಡೆಯುತ್ತಿದ್ದು, ಎಲ್ಲಾ ಪೂರಕ ಸೌಕರ್ಯಗಳನ್ನು (ಕಟ್ಟಡ ಹೊರತು ಪಡಿಸಿ, ಉಳಿದಂತೆ ಎಲ್ಲಾ ಅನಾವರ್ತಕ ಅನುದಾನದಲ್ಲಿ) ಒದಗಿಸುವಲ್ಲಿ ವಿಫಲವಾಗಿರುವುದು ಬಹಳ ವಿಪರ್ಯಾಸದ ಸಂಗತಿ.

   **ಕ್ರಮ: ಕ್ಷೇ.ಶಿ.ಅ ಹಾಗೂ ಬಿ.ಆರ್.ಸಿ ಕೈಗೊಂಡು ಸುವ್ಯವಸ್ಥೆ ಕ್ರಮ ಕೈಗೊಂಡು ಒಂದು ವಾರದೊಳಗೆ ರಾಜ್ಯ ಯೋಜನಾ ಕಚೇರಿಗೆ ವರದಿ ನೀಡುವುದು.**

2. ಮಕ್ಕಳ ಸುರಕ್ಷತೆಗೆ ಬೇಕಾದ ಭದ್ರತೆಗಾಗಿ ಜಿಲ್ಲಾ ಹಂತದಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿ ಸೇಫ್ಟಿಗ್ರಿಲ್, ಸ್ನಾನದ ಸೌಕರ್ಯ, ಕುಡಿಯುವ ನೀರು ಹಾಗೂ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ. ಆದರೆ ಹಾಸಿಗೆ ಹಾಗೂ ವಸತಿ ಸೌಕರ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸದೆ ಇದ್ದು, ಎಲ್ಲಾ ಮಕ್ಕಳಿಗೆ ಬೇಕಾದ ಅಗತ್ಯತೆಗಳನ್ನು ಸುಸಜ್ಜಿತವಾಗಿ ನಿರ್ವಹಿಸಲು ಸೂಚನೆಯನ್ನು ನೀಡಲಾಯಿತು.

   **ಕ್ರಮ: ಮು.ಶಿ/ ಬಿ.ಆರ್.ಸಿ/ಕ್ಷೇ.ಶಿ.ಅ/ಉ.ನಿ/ಡಿ.ವೈ.ಪಿ.ಸಿ**

3. ಸದರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ, ರಾಜ್ಯ ಕಛೇರಿಯಿಂದ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಸದರಿ ನಿರ್ಮಾಣಕ್ಕೆ ಬೇಕಾದ ನಿವೇಶನವು ಸರ್ಕಾರಿ ಶಾಲಾ ಆವರಣ, ಅರೆಹಳ್ಳಿಯಲ್ಲಿ ಲಭ್ಯವಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಹಿತಿ ನೀಡಿದರು. ಈಗಾಗಲೆ ಬಹುಮಹಡಿ ಕಟ್ಟಡಹೊಂದಿರುವ ಅರೆಹಳ್ಳಿ ಶಾಲೆಯ ಆವರಣದಲ್ಲಿ ವಸತಿನಿಲಯವನ್ನು ನಿರ್ಮಿಸಿದಂತಹ ಸಂಧರ್ಭದಲ್ಲಿ ಈ ಶಾಲೆಯು ಉತ್ತಮ ನೈಸರ್ಗಿಕ ಪರಿಸರ ಹೊಂದಿದ ವಸತಿಯುತ ಶಾಲೆಯಾಗಿ ಪರಿಣಮಿಸುತ್ತದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಉ.ನಿ ಹಾಗೂ ಕ್ಷೇತ್ರ ಶಿಕ್ಷಣ ಅಧಿಕಾರಿಗಳೊಡನೆ ಚರ್ಚಿಸಿ ಅವರ ವರದಿ ಆಧಾರದ ಮೇಲೆ ಕಾಮಗಾರಿ ಕಾರ್ಯವನ್ನು ನಿರ್ಮಿಸಲು ತೀರ್ಮಾನಿಸಲಾಯಿತು.

   **ಕ್ರಮ: ಕಾರ್ಯಪಾಲಕ ಅಭಿಯಂತರರು, ಎಸ್.ಎಸ್.ಎ/ ಉ.ನಿ. ಹಾಗೂ ಕ್ಷೇ.ಶಿ.ಅ ಈ ಬಗ್ಗೆ ಕಟ್ಟಡ ನಿರ್ಮಾಣಕ್ಕೆ ಬೇಕಾದ ಎಲ್ಲಾ ಪೂರಕ ಸಿದ್ಧತೆಗಳನ್ನು ಮಾಡುವುದು ಹಾಗೂ 3 ದಿನಗಳೊಳಗಾಗಿ ಕಟ್ಟಡ ಕಾಮಗಾರಿ ಪ್ರಾರಂಭಿಸುವ ಬಗ್ಗೆ ವರದಿ ನೀಡುವುದು**

4. ಮಕ್ಕಳ ದಾಖಲಾತಿ ವಿಚಾರವಾಗಿ ಮಕ್ಕಳೊಂದಿಗೆ ಪರಿಶೀಲನೆಯನ್ನು ಮಾಡಲಾಗಿ, ರಕ್ಷಣೆ ಹಾಗೂ ಪೋಷಣೆ ಅಗತ್ಯ ಇರುವ ಅವಕಾಶ- ವಂಚಿತ ಮಕ್ಕಳನ್ನು ಈ ವಸತಿಯುತ ಶಾಲೆಗೆ ದಾಖಲು ಮಾಡಬೇಕಿದ್ದು, ಹಲವು ಕಾರಣದಿಂದಾಗಿ ನಿಯಮಾನುಸಾರ ಈ ಕೇಂದ್ರದಕ್ಕೆ ದಾಖಲು ಮಾಡಬೇಕಾದ ಮಕ್ಕಳ ಬದಲಿಗೆ ಎಲ್ಲಾ ರೀತಿಯ ಮಕ್ಕಳನ್ನು ಕೇಂದ್ರದಲ್ಲಿ ಇರಿಸಿದ್ದು ಕಂಡುಬಂದಿರುವುದನ್ನು ಗಮನಿಸಲಾಗಿದೆ. ಈ ಕೇಂದ್ರದಲ್ಲಿ ಎಂತಹ ಮಕ್ಕಳನ್ನು

ದಾಖಲು ಮಾಡಬೇಕೆಂಬ ಬಗ್ಗೆ ಕ್ರಮವಹಿಸದ ಅಧಿಕಾರಿಗಳು ಇರುವುದು ವಿಷಾಧದ ಸಂಗತಿಯಾಗಿದ್ದು, ಈ ಬಗ್ಗೆ ಮಕ್ಕಳ ಪ್ರೊಫೈಲ್ ಸಹಿತ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಿ ಅವಕಾಶ ವಂಚಿತ ಮಕ್ಕಳಲ್ಲದವರನ್ನು ಸಮಾಜ ಕಲ್ಯಾಣ ಇಲಾಖೆ, ಬಿ.ಸಿ.ಎಂ ವಸತಿನಿಲಯಗಳಿಗೆ ಅರ್ಹವಾದ ಮಕ್ಕಳನ್ನು ಪೋಷಕರ ಒಪ್ಪಿಗೆ ಪಡೆದು ಮಕ್ಕಳನ್ನು ದಾಖಲು ಮಾಡಲು ಕ್ರಮವಹಿಸಲು ಸೂಚಿಸಲಾಯಿತು.

**ಕ್ರಮ: ಸಿ.ಆರ್.ಸಿ/ಬಿ.ಆರ್.ಸಿ/ಕ್ಷೇ.ಶಿ.ಅ**

5. ಅವಕಾಶ ವಂಚಿತ ಮಕ್ಕಳಿಗಾಗಿ ವಿಶೇಷ ವಸತಿಯುತ ಶಾಲೆಗೆ ಪೋಷಕರಿಲ್ಲದ ಹಾಗೂ ರಕ್ಷಣೆ ಇಲ್ಲದೆ ಅನಾಥವಾಗಿ ಇರುವಂತಹ ಮಕ್ಕಳನ್ನು ಗುರ್ತಿಸಿ ಪೂರ್ಣ ಪ್ರಮಾಣದ ವಸತಿ ಸೌಕರ್ಯ ವನ್ನು ಹಾಗೂ ವಿಶೇಷ ಕಾಳಜಿವಹಿಸಿ ಮಕ್ಕಳ ರಕ್ಷಣೆ, ಪೋಷಣೆ ಹಾಗೂ ಶಿಕ್ಷಣವನ್ನು ಒದಗಿಸುವುದು ಈ ಕೇಂದ್ರದ ಉದ್ದೇಶವಾಗಿದ್ದು, ಇಂತಹ ಮಕ್ಕಳನ್ನು ಗುರ್ತಿಸುವ ಪ್ರಕ್ರಿಯೆಯನ್ನು ಜಿಲ್ಲೆಯ ಎಲ್ಲಾ ಅಧಿಕಾರಿಗಳು ಮಾಡಿ ಕೇಂದ್ರದಲ್ಲಿ 100 ಮಕ್ಕಳನ್ನು ದಾಖಲಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

ಈಗಾಗಲೇ ತಮ್ಮ ವ್ಯಾಪ್ತಿಯ ಯು.ಡಿ.ಸಿ ಕೇಂದ್ರಗಳಲ್ಲಿ ವಿಶೇಷ ತರಬೇತಿಯನ್ನು ಪಡೆಯುತ್ತಿರುವ ಒಂದು ವರ್ಷಕ್ಕೂ ಮೇಲ್ಪಟ್ಟ ಕೇಂದ್ರಗಳಲ್ಲಿರುವ ಮಕ್ಕಳನ್ನು ತಕ್ಷಣ ನಿಯಮಾನುಸಾರ ಇಂತಹ ವಸತಿ ಶಾಲೆಗಳಿಗೆ ಸೇರ್ಪಡೆ ಮಾಡಿಸಿ ಮುಖ್ಯವಾಹಿನಿಗೆ ತಂದು, ಅವಕಾಶ ವಂಚಿತ ಬೇರೆ ಮಕ್ಕಳಿಗೆ ಯು.ಡಿ.ಸಿ ಕೇಂದ್ರಗಳಲ್ಲಿ ದಾಖಲಿಸಿ ನಿಗದಿಪಡಿಸಿದ ಗುರಿಯನ್ನು ಸಾಧಿಸುವಲ್ಲಿ ಸೂಕ್ತ ಕ್ರಮವಹಿಸುವುದು.

**ಕ್ರಮ: ಉ.ನಿ/ಡಿ.ವೈ.ಪಿ.ಸಿ/ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳಿಗೆ, ಇದಕ್ಕೆ ಸಂಬಂಧಿಸಿದಂತೆ ಒಂದು ವಾರದೊಳಗೆ ಕ್ರಮಕೈಗೊಂಡು ವರದಿ ನೀಡಲು ಸೂಚಿಸಿದೆ.**

10.6.13

ರಾಜ್ಯ ಯೋಜನಾ ನಿರ್ದೇಶಕರು,
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು**

**ಪ್ರತಿಯನ್ನು ಅವಗಾಹನೆಗೆ ಸಲ್ಲಿಸಿದೆ:**

3. ಸರ್ಕಾರದ ಕಾರ್ಯದರ್ಶಿಗಳು, ಪ್ರಾ & ಪ್ರೌ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

**ಪ್ರತಿಯನ್ನು**

1. ನಿರ್ದೇಶಕರು(ಕಾರ್ಯಕ್ರಮಗಳು) ಇವರಿಗೆ ಮುಂದಿನ ಅನುಪಾಲನೆಗಾಗಿ
2. ಸಹನಿರ್ದೇಶಕರು(ಕಾರ್ಯಕ್ರಮ) ಇವರಿಗೆ ಮುಂದಿನ ಅನುಪಾಲನೆ ಹಾಗೂ ಸೂಕ್ತ ಕ್ರಮಕ್ಕಾಗಿ
3. ಕಾರ್ಯಪಾಲಕ ಅಭಿಯಂತರರು, ಸಶಿಅ ಇವರಿಗೆ ತುರ್ತುಕ್ರಮಕ್ಕಾಗಿ
4. ರಾಜ್ಯ ಯೋಜನಾ ಕಚೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಅನುಪಾಲನ ಕ್ರಮಕ್ಕಾಗಿ